

ಅರಿಶಿನಗುಂಡಿಗೆ ಹೋಗುವುದಿದ್ದರೂ ಇಲ್ಲಿ ಅನುಮತಿ ಪಡೆದೇ ಹೋಗಬೇಕು. ಕಠಿಣವಾದ ಚಾರಣವಾಗಿರುವುದರಿಂದ ಇಲಾಖೆ ಬೆಳಿಗ್ಗೆ ಆರು ಗಂಟೆಗೆ ಬಂದರೂ ಅನುಮತಿ ನೀಡುವ ವ್ಯವಸ್ಥೆ ಮಾಡಿದೆ.

ಎದುರಿನ ಬಸ್ ಸ್ಟ್ಯಾಂಡಿನಲ್ಲಿ ಹಣ್ಣು, ಬಿಸ್ಕತ್ತು ಇತ್ಯಾದಿಗಳನ್ನು ಖರೀದಿಸಿ ವಾಪಾಸು ಚಾರಣ ಆರಂಭವಾಗುವಲ್ಲಿ ಬಂದು ಅಲ್ಲೇ ಕಾರುಗಳನ್ನು ನಿಲ್ಲಿಸಿದೆವು. ಎಲ್ಲರೂ ಇಂಬಳ ನಿರೋಧಕ ಸಾಕ್ಸ್ **(anti leech socks)** ಧರಿಸಿ ಬೆಟ್ಟ ಏರಲು ಶುರು ಮಾಡಿದಾಗ ಎಂಟೂವರೆಯಾಗಿತ್ತು. ನಿತ್ಯಹಸಿರಿನ ಕಾಡೇ ಆದರೂ ಸಮುದ್ರಕ್ಕೆ ಹತ್ತಿರವಿರುವುದರಿಂದ ಆಗಲೇ ಸಣ್ಣಗೆ ಸೆಕೆ ಶುರುವಾಗಿತ್ತು.

ಘಟ್ಟದ ಬುಡದಿಂದ ಶುರುವಾಗುವ ಚಾರಣವಾದ ಕಾರಣ ಎಲ್ಲೂ ಗುಡ್ಡದ ನೆತ್ತಿಯಾಗಲಿ, ವಿಶಾಲವಾಗಿ ಹರಡಿರುವ ಕಣಿವೆ ಶ್ರೇಣಿಗಳಾಗಲಿ ಇಲ್ಲಿ ಕಾಣಲು ಸಿಗುವುದಿಲ್ಲ. ಆರಂಭದ ತುಸು ದೂರ ಹೊರತುಪಡಿಸಿದರೆ ದಟ್ಟ ಕಾಡಿನಿಂದ ಕೂಡಿದ ದಾರಿ. ಹಿಂದೆ ಅರಣ್ಯ ಇಲಾಖೆಯವರು ತಮ್ಮ ಜೀಪು ಓಡಾಡಲು ಮಾಡಿಕೊಂಡ ದಾರಿಯಲ್ಲೇ ನಡೆಯಬೇಕು. ಹಲವು ಕಡೆ ಮರಗಳು ಮಳೆಗಾಲದಲ್ಲಿ ಬಿದ್ದು ದಾರಿ ಮುಚ್ಚಿದೆ. ಈಗ ವಾಹನಗಳ ಪ್ರವೇಶವನ್ನು ನಿಷೇಧಿಸಿರುವುದರಿಂದ ಅದೇನು ಸಮಸ್ಯೆಯಲ್ಲ. ಅಲ್ಲಲ್ಲಿ ಬಿದ್ದ ಮರಗಳನ್ನು ಬಳಸಿಕೊಂಡು ಹೋಗಬೇಕಷ್ಟೆ. ಕೆಲವೆಡೆ ಬಿದ್ದವು ಬೆತ್ತದ ಗಿಡಗಳಾದ್ದರಿಂದ ಬಹು ಹುಷಾರಾಗಿ ದಾಟಬೇಕಾಯಿತು. ಅವುಗಳ ಮೈ ತುಂಬಾ ಮುಳ್ಳು. ಬಟ್ಟೆಗೋ ಮೈಗೋ ತುಸುವೇ ತಾಕಿದರೂ ಗರಗಸದ ಹಾಗೆ ಗಟ್ಟಿಯಾಗಿ ಹಿಡಿದುಕೊಂಡು ಸೀಳಿಬಿಡುತ್ತವೆ. ಗಮನ ತಪ್ಪಿದರೆ ಅಲ್ಲಲ್ಲಿ ಮೇಲಿನಿಂದ ಜೋತು ಬಿದ್ದ ಅದರ ಕೈಗಳು ಮುಖಕ್ಕೆ, ಕಣ್ಣಿಗೆ ಚುಚ್ಚಿಬಿಡುತ್ತವೆ. ಇದು ತಿಳಿದು ನಾನು ಎಚ್ಚರಿಕೆಯಿಂದ ಇದ್ದರೂ ವಾಪಾಸು ಬರುವಾಗ ಬಿದ್ದ ಬಳ್ಳಿಯೊಂದಕ್ಕೆ ಎಡವಿ ನನ್ನ ಲೀಚ್ ಸಾಕ್ಸನ್ನೂ ಪ್ಯಾಂಟನ್ನೂ ಹರಿದುಕೊಂಡೆ.

ಶ್ರೀವತ್ಸನಂತೆ ನನಗೂ ಆಯಾಸವಾಗುತ್ತಿತ್ತು. ಅಲ್ಲಲ್ಲಿ ನಿಂತು ಉಸಿರೆಳೆದುಕೊಳ್ಳುತ್ತಾ ಬೃಹತ್ ಮರಗಳನ್ನು ನೋಡುತ್ತಾ ನಿಧಾನಕ್ಕೆ ಸಾಗಿದೆವು. ಇದ್ದಕ್ಕಿದ್ದಂತೆ ಅಶ್ವಿನಿ ಕುಮಾರ್ ನಮ್ಮನ್ನು ಮಾತಾಡದಂತೆ ತಡೆದು ಸುಮ್ಮನಿರಿಸಿ ಪಕ್ಕದ ಮರದ ಕ್ಯಾನೋಪಿಯತ್ತ ಕೈತೋರಿಸಿದ. ಕ್ಯಾಸಳ ಅಥವಾ ಕೆಂದಳಿಲು **(Indian giant squirrel)** ಯಾವುದೋ ಹಣ್ಣನ್ನು ತಿನ್ನುತ್ತಾ ಇತ್ತು. ಹೆಸರಿಗೆ ತಕ್ಕಂತೆ ಮೈ ಮೇಲೆ ಕೆಂಪು ತುಪ್ಪಳ ಹೊಂದಿದ ಬಹು ಸುಂದರ ಪ್ರಾಣಿ ಅದು.

ನಾವು ಆಗಾಗ ನಿಂತು ನಮ್ಮ ಕಾಲು ಮೈಗಳನ್ನು ಪರೀಕ್ಷಿಸಿಕೊಳ್ಳಬೇಕಿತ್ತು. ಇಂಬಳಗಳು ನಮ್ಮ ಸಾಕ್ಸಿನ ಮೇಲೆ ಹತ್ತಿ ನಮ್ಮ ಕಾಲನ್ನು ಕಚ್ಚಲು ಜಾಗ ಹುಡುಕುತ್ತಿದ್ದವು. ಇಂಬಳಗಳ ಬಗ್ಗೆ ಭಯಂಕರ ಹೆದರಿಕೆಯಿದ್ದ ಸಹನಾ ಒಂದೊಂದು ಇಂಬಳ ಕಂಡಾಗಲೂ ಸಣ್ಣಗೆ ಚೀರಿ ಕಡ್ಡಿಯಿಂದ ಅವನ್ನು ಕೊಡವುತ್ತಿದ್ದಳು. ಅವು ಮೇಲೆ ಹತ್ತದಂತೆ ಮುಂಜಾಗರೂಕತೆಯಿಂದ ನಾವು ಚಪ್ಪಲಿ ಸಂದಿಯಲ್ಲಿ ಕುಳಿತ ಇಂಬಳಗಳನ್ನು ಕಿತ್ತು ಎಸೆದು ಮುಂದುವರೆದೆವು. ಫೋಟೊ ತೆಗೆಯಲೆಂದು ನಾನು ಕಾಡೊಳಗೆ ಹೋದಾಗ ಎಲೆಯ ಮೇಲೆಲ್ಲೋ ಇದ್ದ ಇಂಬಳವೊಂದು ನನ್ನ ಕುತ್ತಿಗೆಗೆ ಕಚ್ಚಿ ವಾಪಾಸು ಬಂದಾಗ ಶ್ರೀವತ್ಸ ಅದನ್ನು ನೋಡಿ ತೆಗೆದು ಎಸೆದ.

ಹೀಗೆಯೇ ಏರುದಾರಿಯಲ್ಲಿ ಸುಮಾರು ಆರು ಕಿಲೋಮೀಟರು ನಡೆದ ನಂತರ ಅರಣ್ಯ ಇಲಾಖೆಯವರು ಹಾಕಿದ ಹಳೆಯ 'ಅರಿಶಿನ ಗುಂಡಿ' ಎಂದು ಎಡ ಭಾಗಕ್ಕೆ ಬಾಣದ ಗುರುತು ಹಾಕಿದ್ದ ಬೋರ್ಡು ಕಾಣಿಸಿತು. ಇನ್ನು ಗುಡ್ಡ ಹತ್ತುವುದು ಮುಗಿಯಿತು ಎಂಬ ಸಂತಸದಲ್ಲಿ ಖುಷಿಯಿಂದ ನಿಟ್ಟುಸಿರು ಬಿಟ್ಟೆವು. ತಂದಿದ್ದ ನೀರು, ಹಣ್ಣು ಬಿಸ್ಕೆಟ್‌ಗಳನ್ನೂ ತಿಂದು ತುಸು ಸುಧಾರಿಸಿಕೊಂಡೆವು. ಇಂಬಳಗಳ ಭಯದಿಂದ ಯಾರೂ ನೆಲಕ್ಕೆ ಕೂರಲಿಲ್ಲ. ಸತತವಾಗಿ ಫೋಟೊ ಹೊಡೆಯುತ್ತಿದ್ದ ಅಶ್ವಿನಿ, ಅಲ್ಲೂ ಏನನ್ನೋ ಹುಡುಕಿ ಫೋಟೊ ತೆಗೆಯತೊಡಗಿದ.

ಅಲ್ಲಿಂದ ನಮ್ಮ ಪಯಣ ದಟ್ಟ ಕಾಡೊಳಗೆ ಜಾರಿತು. ನಮ್ಮ ಗೈಡು ಪ್ರಮೋದ ತೋರಿಸಿದ ದಾರಿಯಲ್ಲಿ ಒಂದೇ ಸಮನೆ ಇಳಿಯತೊಡಗಿದೆವು. ಸುತ್ತ ಎತ್ತರೆತ್ತರ ಮರಗಳು. ಕಡಿದಾದ ಇಳಿಜಾರು. ನಿಂತರೆ ಮುಗಿಬಂದು ಎರಗುವ ಇಂಬಳಗಳು. ನಾವು ಇಳಿದಂತೆಲ್ಲ ಜಲಪಾತದ ನೀರ ಸದ್ದು ಹತ್ತಿರವಾಗುತ್ತಿತ್ತು. ಅದೇ ಖುಷಿಯಲ್ಲಿ ಸರಸರನೇ ನಡೆಯತೊಡಗಿದೆವು. ಅಶ್ವಿನಿ ಮತ್ತು ದಿನೇಶ್ ಮಾತಾಡಿಕೊಂಡು ಬರುತ್ತಿದ್ದರು. ಇದ್ದಕ್ಕಿದ್ದಂತೆ